ಸಿಟಿಯನ್ನು ಒಂದು ಸುತ್ತು ಹಾಕಿ ಮತ್ತೆ ಅಪಾರ್ಟ್‌ಮೆಂಟ್‌ನ ಬಳಿ ಬಂದು ನಿಂತಿತು. ಬೈಕ್ನ ಬಳಿಯಿದ್ದ ಇಬ್ಬರೂ ಕಾರಿನತ್ತ ನಡೆದರು.

3.

ಪಾಂಬು ಕಾರಿನಿಂದ ಇಳಿದ ಕೂಡಲೇ ಪಿಸಿ ಸಾರಂಗ ಆತುರದಿಂದ ಅವನತ್ತ ನಡೆದ. ಇನ್ಸ್‌ಪೆಕ್ಟರ್ ರಾಜಧಾನಿ ಆತುರ ತೋರಿದ ತನ್ನ ಸಹಾಯಕನನ್ನು ಭುಜ ಹಿಡಿದು ನಿಲ್ಲಿಸಿದ.

'ಅವಸರ ಮಾಡ್ಬೇಡ. ನಮ್ಮ ಸಾಹಸವನ್ನೆಲ್ಲಾ ಅವನತ್ರ ಬಾಯಿ ಬಿಡ್ಬೇಡ' ಎಚ್ಚರಿಕೆಯ ಮಾತುಗಳು ಬಂದಾಗ ಪಿಸಿ ತನ್ನ ಆತುರವನ್ನು ನಿಯಂತ್ರಿಸಿಕೊಂಡ.

ಸ್ಯಾಂಟ್ರೋ ಕಾರಿನ ಇಂಜಿನ್ ನಿಷ್ಕ್ರಿಯವಾಯಿತು. ಇಬ್ಬರೂ ತನಗಾಗಿ ಕಾಯುತ್ತಿರುವಂತೆ ಕಂಡಿತು ಪಾಂಬುವಿಗೆ. ಕಾರಿನ ಬಾಗಿಲನ್ನು ಕಾಲಿನಿಂದ ದೂಡಿ ಅವರತ್ತ ನಡೆದ.

ಇನ್ಸ್‌ಪೆಕ್ಟರ್ ರಾಜಧಾನಿ ಪಲ್ಸರ್‌ನ ಮೇಲೆ ಕುಳಿತು ಹ್ಯಾಂಡ್ಲ್ ಬಾರ್ ಹಿಡಿದು ನೋಟ ಪಾಂಬುವಿನತ್ತ ಬೀರಿದ. ಪಾಂಬು ಏನೂ ಅರಿಯದವನಂತೆ ಅವನ ಮುಂದೆ ನಿಂತಾಗ ಪಿಸಿ ಬಾಯಿಗೆ ಬೀಗ ಜಡಿದವರಂತೆ ಸುಮ್ಮನಿದ್ದ.

'ಪಾಂಬು, ನೀನು ಇರ್ತಲೆಯ ಹಾವು' ಇನ್ಸ್‌ಪೆಕ್ಟರ್ ನೋಟ ಬದಲಿಸಿ ಹತ್ತಿರ ಬಂದವನನ್ನು ಸಂಬೋಧಿಸಿದ.

ಪಾಂಬು ತಕ್ಷಣಕ್ಕೆ ಉತ್ತರಿಸಲಿಲ್ಲ. ತನ್ನ ಬಗ್ಗೆ ಇನ್ಸ್‌ಪೆಕ್ಟರ್‌ಗೆ ಏನೂ ತಿಳಿದಿಲ್ಲವೆನ್ನುವುದು ಪಾಂಬುವಿನ ಯೋಚನೆ.

'ಸಾರ್, ಆರೋಪ ಯಾಕೇಂತ ಕೇಳ್ಬಹುದೆ?' ಚುಟುಕಾಗಿ ಪ್ರಶ್ನಿಸಿದ.

'ನನಗೇನೋ ಕಾರಣ ಕೊಟ್ಟು ನೀನು ಮರಳುದಿಣ್ಣೆಯಿಂದ ವಾಪಾಸಾದೆ. ಆದ್ರೆ ನನ್ನ ಸಹಾಯಕ ನಿನ್ನ ಬಗ್ಗೆ ಇನ್ನೊಂದು ಮಾಹಿತಿ ಕೊಟ್ಟ. ಅಷ್ಟರಲ್ಲಿ ನೀನು ದಿಣ್ಣೆಯಿಂದ ಮರಳಿಯಾಗಿತ್ತು' ಯಾವುದೇ ನಿಗೂಢವಿರದ ಮಾತುಗಳು. ಪಾಂಬು ಸಮಾಧಾನ ಹೊಂದಿದವರಂತೆ ನಿಡುಸುಯ್ದ.

'ಸಾರ್, ನಿಮ್ಮ ಸಹಾಯಕ ಯಾವ ಮಾಹಿತಿ ಕೊಟ್ಟ? ನೀವು ಹೇಳಿದ್ರೆ ಅದನ್ನು ನಾನು ನಿಮಗೆ ಸವಿವರವಾಗಿ ಒಪ್ಪಿಸ್ಬಹುದು.'

ಪಿಸಿ ಸಾರಂಗನ ಮುಖ ಬಿಗಿದುಕೊಂಡಿತು. ಆ ಬಿಗಿತ ಅಧಿಕಾರಿಯ ಪ್ರಶಂಸೆಗೆ. ಅಧಿಕಾರಿಗೆ ಸಹಾಯಕನನ್ನು ಹೊಗಳುವ ಅವಶ್ಯಕತೆಯಿರಲಿಲ್ಲ. ಅವನನ್ನು ಸುಮ್ಮನಿರಿಸುವುದಕ್ಕಾಗಿಯೇ ಆತ ಹೂಡಿದ ಸಂಚು.

'ಇಲ್ಲಿ ಕಲ್ಲುಗಳಿಗೂ ಮರಗಳಿಗೂ ಕಿವಿಯಿದೆ ಅಂತಾರೆ. ಇತ್ತ ಬಾ' ಗುಟ್ಟು ಹೇಳುವಂತೆ ಹತ್ತಿರಕ್ಕೆ ಕರೆದ.

ಪಾಂಬು ಕುತೂಹಲದಿಂದ ಇನ್ಸ್‌ಪೆಕ್ಟರ್ ನ ಹತ್ತಿರಕ್ಕೆ ಸರಿದ. ಪಿಸಿಯ ಕಣ್ಣುಗಳು ಸಂಕುಚಿತಗೊಂಡವು. ಸಮುದ್ರ ದಂಡೆಯಲ್ಲಿ ನಡೆದ ದೃಶ್ಯದ ಮುಂದುವರೆದ ಭಾಗದಂತೆ ಕಂಡಿತು. ಪಾಂಬುವಿನಿಂದ ಮಾಹಿತಿಯನ್ನು ಸಂಗ್ರಹಿಸಿ, ತನ್ನಿಂದ ಅದನ್ನು ಮುಚ್ಚಿಡುತ್ತಿದ್ದಾನೆ ಇನ್ಸ್‌ಪೆಕ್ಟರ್.

ಸಾರಂಗ ಅರ್ಥೈಸಿಕೊಂಡವರಂತೆ ದೂರಕ್ಕೆ ಸರಿದು ನಿಂತ ಅವರಿಬ್ಬರಿಗೆ ಅನುಕೂಲವಾಗುವಂತೆ. ಆತ ದೂರ ಸರಿಯುತ್ತಲೇ ಇನ್ಸ್‌ಪೆಕ್ಟರ್‌ನ ದನಿ ತೀರ ತಗ್ಗಿದಂತೆ ಇತ್ತು. ಪಿಸುಮಾತುಗಳು ಅರ್ಥವಾಗದಷ್ಟು ಅಸ್ಪಷ್ಟವಾಗಿದ್ದವು. ಪಿಸಿಯ ಹಿತ್ತಾಳೆ ಕಿವಿ ಅತ್ತವೇ ಇತ್ತು.

ಪಿಸಿ ದೂರ ಸರಿದದ್ದು ಅನುಕೂಲವೇ ಆಯಿತೆನ್ನುವಂತೆ ಇನ್ಸ್‌ಪೆಕ್ಟರ್ ಬೈಕ್‌ನಿಂದ ಇಳಿದು ಬಂದ.

'ಪಾಂಬು, ನನ್ನ ಸಹಾಯಕ ಮಹಾಚಾಲಾಕಿ. ನೀನು ನನ್ನ ಕಣ್ಣಿಂದ ತಪ್ಪಿಸಿಕೊಳ್ಳಬಹುದು. ಆದರೆ ಅವನ ಕಣ್ಣಿಗೆ ಮಣ್ಣೆರಚೋದು ಅಸಾಧ್ಯ, ತಿಳ್ಕೋ'

ಇನ್ಸ್‌ಪೆಕ್ಟರ್‌ನ ಮಾತಿಗೆ ಏನೂ ಅರಿಯದವನಂತೆ ಮುಖ ಮಾಡಿದ ಪಾಂಬು. ಮುಗ್ಧತೆಯಂತು ಅಲ್ಲಿರಲಿಲ್ಲ. ಇದು ರಾಜಧಾನಿಯ ಗಮನಕ್ಕೆ ಬಾರದಿರಲಿಲ್ಲ.

'ಸಾರ್, ನಿಮ್ಮ ಮಾತಿನ ಅರ್ಥವಾಗ್ಲಿಲ್ಲ' ಪ್ರಶ್ನೆಯಲ್ಲಿ ಮುಗ್ಧತೆಯ ಸೋಗಿತ್ತು.

'ಅರ್ಥವಾಗಿದೆ ಪಾಂಬು ನಿನಗೆ. ನಾವು ನಿನ್ನನ್ನು ಹಿಂಬಾಲಿಸಿಕೊಂಡು ಬಂದಿದ್ದೇವೆ ಅನ್ನೋದು ನಿನಗೆ ಗೊತ್ತಾ?'

ಪಾಂಬುವಿನ ಮುಖ ಕರೆಂಟು ಹೊಡೆದಂತೆ ಅರೆಕ್ಷಣ ಕಪ್ಪಿಟ್ಟಿತು. ಅದನ್ನು ತೋರಿಸಿಕೊಳ್ಳದಂತೆ ಮುಖ ಕಿವುಚಿದ. ಇನ್ಸ್‌ಪೆಕ್ಟರ್ ಮೀಸೆಯಡಿಯಲ್ಲಿಯೇ ನಕ್ಕ.

'ಇಲ್ಲ, ಏನಾಗ್ಬೇಕಾಗಿತ್ತು? ನಾನು ಈ ದಾರಿಯಿಂದ ಹೋಗ್ತಿದ್ದೋನಿಗೆ ನಿಮ್ಮ ಬೈಕ್ ಕಾಣಿಸ್ತು. ಅದಕ್ಕೆ ವಾಪಾಸು ಬಂದೆ'

ಶುದ್ಧ ಸುಳ್ಳು ಅನ್ನುವಂತೆ ಇನ್ಸ್‌ಪೆಕ್ಟರ್ ಮುಖ ಮಾಡಿದ. ಪಾಂಬುವಿಗೆ ಅದರಿಂದ ತಪ್ಪಿಸಿಕೊಳ್ಳುವಂತೆ ಇರಲಿಲ್ಲ.

'ನೀನು ವಾಪಾಸು ಬಂದಿದ್ದು ಒಳ್ಳೆಯದಾಯಿತು. ನಿನ್ನ ಒಂದು ಪ್ರಶ್ನೆ ಕೇಳ್ತೀನಿ. ಅದು, ನಮ್ಮ ಪಿಸಿ ಏನೋ ಹೇಳ್ದ. ಅದನ್ನ ಕೇಳ್ತಾ ಇದ್ದೀನಿ' ಪಿಸಿಯತ್ತ ನೋಡಿದ ಇನ್ಸ್‌ಪೆಕ್ಟರ್. ಅವನು ದೂರದಲ್ಲಿ ನಿಂತು ಎತ್ತಲೋ ನೋಡುತ್ತಿದ್ದ.

'ನೀನು ಹೇಳಿದ ವ್ಯಕ್ತಿ ನಿನ್ನ ಕಾರಿನಲ್ಲಿಯೇ ಕುಳಿತಿದ್ದ ಅನ್ನೋದು ಪಿಸಿಯ ಗುಮಾನಿ. ಇದಕ್ಕೆ ನೀನು ಏನು ಹೇಳುತ್ತೀಯಾ?'

ಪಾಂಬು ಸಶಕ್ತವಾದ ನಗು ಹಾಕಿದ. ಪಿಸಿಯ ಗಮನ ಕೂಡ ಅತ್ತ ತಿರುಗಿತು. ಇನ್ಸ್‌ಪೆಕ್ಟರ್ ಅವನ ನಗುವಿಗೆ ಬೆದರಿದಂತೆ ನಿಂತ.

'ಸಾರ್, `ಬಂಡೆ'ಯಿಂದ ನಾನೊಬ್ಬನೆ ಹಿಂತಿರುಗಿದ್ದನ್ನ ನೀವು ನೋಡಿದ್ದೀರಿ. ನಿಮ್ಮ ಜೊತೆಗೆ ಮರಳು ದಿಣ್ಣೆಯಲ್ಲಿ ಹೆಜ್ಜೆ ಹಾಕ್ದೋನು ನಾನು. ಇಷ್ಟಾಗಿಯೂ ನನ್ನ ನೀವು ಅನುಮಾನಿಸೋದು ಅಂದ್ರೆ, ಹೇಗೆ ಸಾರ್'

ಇನ್ಸ್‌ಪೆಕ್ಟರ್‌ಗೆ ಪಾಂಬುವಿನ ಮೇಲೆ ಕನಿಕರ ಮೂಡಿತು.

'ನಿನ್ನನ್ನ ಅನುಮಾನ ಪಡ್ತಿಲ್ಲ ನಾನು. ನನ್ನ ಸಹಾಯಕ ಬಹಳ ಚುರುಕಿನ, ನೆನಪು ಶಕ್ತಿ ಇರೋ ಮನುಷ್ಯ. ಅವನು ನಿನ್ನ ಕಾರಿನಲ್ಲಿ ಕುಳಿತಿದ್ದ ವ್ಯಕ್ತಿಯನ್ನು ಗಮನಿಸಿದ್ದಾನೆ ಅನಿಸ್ತಿದೆ. ಅದಕ್ಕೆ... ನಿನ್ನ ಪ್ರಶ್ನಿಸ್ದೆ'

ಇನ್ಸ್‌ಪೆಕ್ಟರ್‌ನ ಮಾತಿನಲ್ಲಿ ಯಾವುದೇ ಅನುಮಾನವಿಲ್ಲವೆನ್ನುವುದು ಪಾಂಬುವಿನ ಗಮನಕ್ಕೂ ಬಂತು. ಸತ್ಯ ಮುಚ್ಚಿಡುವುದು ಒಳಿತು. ಪಿಸಿಯ ಮಾತನ್ನು ತಡೆಯುವುದು ಸುಲಭ. ಆಲೋಚಿಸುತ್ತಲೇ ಪಿಸಿ ನಿಂತಿರುವತ್ತ ನೋಡಿದ. ಪಿಸಿ ಪಾಂಬುವನ್ನೇ ಗಮನಿಸುತ್ತಿದ್ದ. ಪಾಂಬು ಎಚ್ಚೆತ್ತುಕೊಂಡವರಂತೆ ಇನ್ಸ್‌ಪೆಕ್ಟರ್‌ನತ್ತ ನೋಡಿದ.

'ಸಾರ್, ನನಗೀಗ ಅರ್ಥವಾಯಿತು. ನನ್ನ ಕಾರಿನಲ್ಲಿದ್ದೋನು ಮುತ್ತು ಚಾಂಡಿ. ವಾರಕ್ಕೊಮ್ಮೆ ಸಿಟಿಗೆ ಬರ್ತಾನೆ. ಅವನ ಕಾರು ಕೆಟ್ಟು ಹೋಗಿ ದಾಬಾದ ಮುಂದೆ ನಿಂತಿದೆ'

ಇನ್ಸ್‌ಪೆಕ್ಟರ್‌ನ ಮುಖ ಮುದುಡಿತು.

'ಓಹೋ! ಐಸೀ, ಮುತ್ತುಚಾಂಡಿ! ಗೊತ್ತಾಯ್ತು. ಅವನನ್ನು ಈಗಷ್ಟೇ ದಾಬಾದಲ್ಲಿ ನೋಡ್ದ ಹಾಗಿತ್ತು'

ಪಾಂಬು ನಾಲಗೆ ಕಚ್ಚಿಕೊಂಡ.

'ಸಾಧ್ಯವೇ ಇಲ್ಲ ಸಾರ್. ಆತ ನನ್ನ ಜೊತೆಗೆ ಈಗಷ್ಟೇ ಸಿಟಿಗೆ ಬಂದ. ಈಗ ಅವನ ಅಪಾಟರ್ಮೆಂಟ್ನಲ್ಲಿರಬಹುದು' ದೂರಕ್ಕೆ ಕೈ ಚಾಚಿದ ಪಾಂಬು. ಇನ್ಸ್‌ಪೆಕ್ಟರ್‌ನ ಗಮನ ಅತ್ತ ಸುಳಿಯಿತು.

'ಓಹೋ! ಅದು ಮುತ್ತುಚಾಂಡಿಯ ಅಪಾರ್ಟ್‌ಮೆಂಟ್. ಮತ್ತೆ ಮರಳುದಿಣ್ಣೆಯಲ್ಲಿ ಕಾರಿನಲ್ಲಿದ್ದ ವ್ಯಕ್ತಿ ಸಾರಂಗನನ್ನು ನೋಡುತ್ತಲೇ ಓಡಿದಾಂತ ಅವನು ಹೇಳ್ದ. ಅದು ಯಾಕೆ?'

'ಸುಳ್ಳು ಸಾರ್! ನಿಮ್ಮ ಪಿಸಿ ಹೇಳಿರೋದೆಲ್ಲ ಸುಳ್ಳು. ಕಾರಿನಿಂದ ಓಡೋದಿಕ್ಕೆ ಸಾಧ್ಯವಿಲ್ಲ. ಯಾಕಂದ್ರೆ ನನ್ನ ಕಾರಿಗೆ ಸೆಂಟರ್ ಲಾಕ್ ಅಳವಡಿಸಿದ್ದೀನಿ. ಅದನ್ನು

## ಅಕ್ಷರ ಸಿರಿ

ಕೈಕಟ್ಟಿ ಕುಳಿತರೆ–
ಕೂಳು ಹುಟ್ಟುವುದಿಲ್ಲ!
ಮೈಮುರಿದು ದುಡಿದರೆ–
ಊಟಕ್ಕೆ ಬರವಿಲ್ಲ..
ಎದೆಗೆ ನಾಲ್ಕಕ್ಷರ ಬಿದ್ದರೆ–
ಬದುಕಿಗೇ ಬರವಿಲ್ಲ..!

★ ದೊಡ್ಡರಂಗೇಗೌಡ



ಈಶ್ವರ